
4. ಯಾರು ನಮ್ಮ ದೇವರು ?



ದೇವರಂತೆ ದೇವರು !
ಯಾರು ನಮ್ಮ ದೇವರು ?
ಹೆತ್ತ ತಾಯಿ ದೇವರು,
ಹೆತ್ತ ತಂದೆ ದೇವರು,
ನಮ್ಮ ಗುರು ದೇವರು,
ಮುದ್ದು ಕಂದ ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಬೆಳಗೊ ಸೂರ್ಯ ದೇವರು,
ಹರಿವ ನೀರು ದೇವರು,
ಚಲಿಪ ಗಾಳಿ ದೇವರು,
ಬೆಳೆವ ಭೂಮಿ ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಹಸಿರು ಹಾಸು ದೇವರು,
ನಗುವ ಹೂವು ದೇವರು,
ಪ್ರಾಣಿ ಪಕ್ಷಿ ದೇವರು,
ಪ್ರಕೃತಿ ಸೊಬಗು ದೇವರು.

ದೇವರಂತೆ ದೇವರು !
ಯಾರು ನಮ್ಮ ದೇವರು ?
ಸತ್ಯವಾಣಿ ದೇವರು,
ತ್ಯಾಗ ಮೂರ್ತಿ ದೇವರು,
ನಿಸ್ವಾರ್ಥರಹಿತ ದೇವರು,
ಪ್ರೇಮ ಹೃದಯಿ ದೇವರು.

ಆರ್ ಸರಸ್ವತಿ

ಶಬ್ದಗಳ ಅರ್ಥ :

ಹೆತ್ತ – ಜನ್ಮಕೊಟ್ಟ ; ಕಂದ – ಕೂಸು ; ಚಲಿಪ – ಚಲಿಸುವ

- ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.

ಪ್ರಕೃತಿ– ..... ; ಸೊಬಗು – ..... ; ವಾಣಿ – .....

ಅಭ್ಯಾಸ

ಪ್ರಶ್ನೆ 1) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಯಾವ ವಾಣಿಗೆ ದೇವರು ಎಂದು ಹೇಳಲಾಗಿದೆ ?

ಉತ್ತರ .....

.....

ಆ) ಸೊಬಗನ್ನು ಯಾವುದಕ್ಕೆ ಹೋಲಿಸಿದ್ದಾರೆ ?

ಉತ್ತರ .....

.....

ಇ) ದೇವರು ಎಂಥ ಹೃದಯ ?

ಉತ್ತರ .....

.....

ಪ್ರಶ್ನೆ 2) ಕವಿತೆಯ ಸಾಲುಗಳನ್ನು ಪೂರ್ಣಮಾಡಿರಿ.

ದೇವರಂತೆ ದೇವರು !

.....

.....

.....

.....

..... ಕಂದ ದೇವರು.

ಪ್ರಶ್ನೆ 3) ಕೆಳಗಿನ ಶಬ್ದಗಳಿಗೆ ವಿರುದ್ಧಾರ್ಥಕ ಶಬ್ದಗಳನ್ನು ಬರೆಯಿರಿ.

ನಗು X ..... ; ಸತ್ಯ X ..... ; ಸ್ವಾರ್ಥ X .....

ಪ್ರಶ್ನೆ 4) 'ಅ' ಪಟ್ಟಿಯಲ್ಲಿಯ ಶಬ್ದಗಳನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

'ಅ' ಪಟ್ಟಿ		'ಬ' ಪಟ್ಟಿ
1) ಹಸಿರು	☐	(ಅ) ಸೂರ್ಯ
2) ಚಲಿಸುವ	☐	(ಆ) ನೀರು
3) ಹರಿವ	☐	(ಇ) ಹಾಸು
4) ನಗುವ	☐	(ಈ) ವಾಣಿ
5) ಬೆಳೆವ	☐	(ಉ) ಗಾಳಿ
6) ಬೆಳಗೊ	☐	(ಊ) ಹೂವು
7) ಸತ್ಯ	☐	(ಎ) ಭೂಮಿ

ಉಪಕ್ರಮ : ನಿಮ್ಮ ಸಮೀಪದ ವೃದ್ಧಾಶ್ರಮಕ್ಕೆ ಭೇಟಿಕೊಟ್ಟು ಮಾಹಿತಿ ಸಂಗ್ರಹಿಸಿರಿ.

ವ್ಯಾಕರಣ ವಿಭಾಗ

ಕ್ರಿಯಾಪದಗಳು

ಬನ್ನಿರಿ ನಾವು ತಿಳಿದು ಕೊಳ್ಳೋಣ

ಕ್ರಿಯೆಯ ಅಥವಾ ಕೆಲಸದ ಅರ್ಥವನ್ನು ಕೊಡುವ ಪದಗಳು 'ಕ್ರಿಯಾಪದ' ಗಳೆನಿಸುವವು. ಕ್ರಿಯಾಪದವು ಕರ್ತೃವಿನ ಕಾರ್ಯದ ಬಗ್ಗೆ ಹೇಳುವದು.

ಉದಾ : ನಾಯಿಯು ಓಡುತ್ತದೆ.
ಗಿಳಿಯು ಹಣ್ಣನ್ನು ತಿಂದಿತು.
ನಾವು ಹಾಡು ಕೇಳುವೆವು.

ಮೇಲಿನ ವಾಕ್ಯಗಳಲ್ಲಿ ಓಡುತ್ತದೆ, ತಿಂದಿತು, ಕೇಳುವೆವು ಎಂಬ ಕ್ರಿಯಾಪದಗಳು ಓಡು, ತಿನ್ನು, ಕೇಳು ಎಂಬ ಮೂಲ ಶಬ್ದಗಳಿಂದ ಉಂಟಾಗಿವೆ.

ಈ ಮೂಲ ಶಬ್ದಗಳಿಗೆ 'ಧಾತುಗಳು' ಎನ್ನುವರು. ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿದಾಗ 'ಕ್ರಿಯಾಪದ'ಗಳಾಗುವವು.

ಕ್ರಿಯಾವಿಶೇಷಣ

ಕ್ರಿಯೆ, ರೀತಿ, ಕಾಲ, ಸ್ಥಳ ಮೊದಲಾದವುಗಳನ್ನು ಸೂಚಿಸಿ ಕ್ರಿಯಾಪದಗಳನ್ನು ವರ್ಣಿಸುವ ಶಬ್ದಗಳಿಗೆ 'ಕ್ರಿಯಾವಿಶೇಷಣ'ಗಳೆನ್ನುವರು.

ಉದಾ : ಮಕ್ಕಳು ಚೆನ್ನಾಗಿ ಆಡುತ್ತಾರೆ.
ಗಾಳಿಯು ಸುಯ್ಯನೆ ಬೀಸುತ್ತಿದೆ.
ಇಲ್ಲಿ ಚೆನ್ನಾಗಿ, ಸುಯ್ಯನೆ ಎಂಬ ಪದಗಳು – ಕ್ರಿಯೆಯನ್ನು ವರ್ಣಿಸಿರುವದರಿಂದ
'ಕ್ರಿಯಾವಿಶೇಷಣ'ಗಳೆನಿಸುತ್ತವೆ.

ಕಾಲಗಳು

ಕ್ರಿಯೆ ನಡೆದ, ನಡೆಯುತ್ತಿರುವ ಅಥವಾ – ಮುಂದೆ ನಡೆಯುವ ಅಂಶವನ್ನು ತಿಳಿಸುವುದಕ್ಕೆ 'ಕಾಲ'ಗಳು ಎನ್ನುವರು.

ಕಾಲಗಳಲ್ಲಿ ಮೂರು ಪ್ರಕಾರಗಳು

1) ಭೂತಕಾಲ
2) ವರ್ತಮಾನ ಕಾಲ
3) ಭವಿಷ್ಯತ್‌ಕಾಲ

1) ಭೂತಕಾಲ –

ನಡೆದುಹೋದ(ಆಗಿಹೋದ) ಕ್ರಿಯೆಯನ್ನು ಸೂಚಿಸುವುದಕ್ಕೆ 'ಭೂತಕಾಲ' ಎನ್ನವರು.

ಉದಾ: ಗಿಳಿಯು ಹಣ್ಣನ್ನು ತಿಂದಿತು.
ಗಿರಿಜೆಯು ಪತ್ರವನ್ನು ಬರೆದಳು.

2) ವರ್ತಮಾನಕಾಲ :

ಈಗ ನಡೆಯುತ್ತಿರುವ ಕ್ರಿಯೆಯನ್ನು ಸೂಚಿಸುವುದಕ್ಕೆ 'ವರ್ತಮಾನಕಾಲ' ಎನ್ನುವರು.

ಉದಾ : ವಿಜಯನು ಊಟವನ್ನು ಮಾಡುತ್ತಿದ್ದಾನೆ.
ಗಾಯತ್ರಿಯು ಪತ್ರವನ್ನು ಬರೆಯುತ್ತಿದ್ದಾಳೆ.

3) ಭವಿಷ್ಯತ್‌ಕಾಲ :

– ಕ್ರಿಯೆ ಮುಂದೆ ನಡೆಯಲಿದೆ ಎಂದು ಹೇಳುವುದಕ್ಕೆ 'ಭವಿಷ್ಯತ್‌ಕಾಲ' ಎನ್ನುವರು.


ಉದಾ : ನಾನು ನಾಳೆ ಊರಿಗೆ ಹೋಗುವವನಿದ್ದೇನೆ.
ನಾವು ಮುಂದಿನ ವಾರ ಡಾ. ಎಸ್ ರಾಧಾಕೃಷ್ಣನ್‌ರವರ ಜಯಂತಿಯನ್ನು ಆಚರಿಸುವವರಿದ್ದೇವೆ.

ವಿಭಕ್ತಿ ಪ್ರತ್ಯಯಗಳು


ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ ಬೇರೆ ಅರ್ಥವನ್ನು ಉಂಟುಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ' ಎಂದು ಹೆಸರು. ವಿಭಕ್ತಿಪ್ರತ್ಯಯಗಳಲ್ಲಿ ಒಟ್ಟು 8 ಪ್ರಕಾರಗಳಿದ್ದು ಅವುಗಳ ಪ್ರತ್ಯಯ ಹಾಗೂ ಉದಾಹರಣೆಗಳು ಈ ಕೆಳಗಿನಂತಿವೆ.


ವಿಭಕ್ತಿ	ಪ್ರತ್ಯಯ	ಉದಾಹರಣೆ
ಪ್ರಥಮಾ	ಉ	ಭೀಮನು
ದ್ವಿತೀಯಾ	ಅನ್ನು	ಭೀಮನನ್ನು
ತೃತೀಯಾ	ಇಂದ	ಭೀಮನಿಂದ
ಚತುರ್ಥಿ	ಗೆ, ಇಗೆ, ಅಕ್ಕೆ	ಭೀಮನಿಗೆ
ಪಂಚಮಿ	ದೆಸೆಯಿಂದ	ಭೀಮನ ದೆಸೆಯಿಂದ
ಷಷ್ಠೀ	ಅ	ಭೀಮನ
ಸಪ್ತಮಿ	ಅಲ್ಲಿ	ಭೀಮನಲ್ಲಿ
ಸಂಬೋಧನೆ	ಏ,ಇರಾ	ಭೀಮನೇ







































- पाठ्यपुस्तक मंडळाची वैशिष्ट्यपूर्ण पाठ्येत्तर प्रकाशने.
- नामवंत लेखक, कवी, विचारवंत यांच्या साहित्याचा समावेश.
- शालेय स्तरावर पूरक वाचनासाठी उपयुक्त.

पुस्तक मागणीसाठी www.ebalbharati.in, www.balbharati.in संकेत स्थळावर भेट द्या.

साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५



ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ – 411004.

ಕನ್ನಡ ಸುಗಮಭಾರತಿ ಇ. ೭ ವಿ

₹ 27.00